# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 105 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ .ಎಸ್. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 11-08-2025 |
| ಉತ್ತರಿಸುವವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರ್ಕಾರದ ಆಸ್ತಿ ಭದ್ರತೆ ಆವರಣದಲ್ಲಿ ಅಸ್ತಿತ್ವದಲ್ಲಿರುವ ಎಷ್ಟು ಜನೌಷಧಿ ಕೇಂದ್ರಗಳನ್ನು ಸರ್ಕಾರ ಗುರುತಿಸಿದೆ; ಈ ಕೇಂದ್ರಗಳನ್ನು ತೆರವುಗೊಳಿಸಲು ಏಕೆ ತೀರ್ಮಾನಿಸಿದೆ; ತೀರ್ಮಾನವು ಯಾವ ಸಮಿತಿಯಲ್ಲಿ ಅಥವಾ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ; | ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ ಸರ್ಕಾರದ ಆಸ್ತಿ ಭದ್ರತೆ ಆವರಣದಲ್ಲಿನ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಅಸ್ತಿತ್ವದಲ್ಲಿರುವ 207 ಜನೌಷಧಿ ಕೇಂದ್ರಗಳಿಗೆ ಅನುಮತಿ ನೀಡಿದ್ದು (**ಅನುಬಂಧ-1** ರಲ್ಲಿ ಲಗತ್ತಿಸಿದೆ.)<br><br>ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳಿಗೆ ಯಾವುದೇ ಔಷಧಿಗಳನ್ನು ಖರೀದಿಸಲು ಶಿಫಾರಸ್ಸನ್ನು ಮಾಡದಂತೆ ನೋಡಿಕೊಳ್ಳುವುದು ಸರ್ಕಾರದ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಆಸ್ಪತ್ರೆ ಆವರಣದೊಳಗೆ ಜನೌಷಧಿ ಕೇಂದ್ರಗಳನ್ನು ತೆರೆಯುವುದು ಸರ್ಕಾರದ ನೀತಿಗೆ ವ್ಯತಿರಿಕ್ತವಾಗಿರುತ್ತದೆ.<br><br>ಆದುದರಿಂದ, ಸರ್ಕಾರದ ಅದೇಶ ಸಂಖ್ಯೆ ಅಕುಕ 173 ಪಿಟಿಡಿ 2025, ಬೆಂಗಳೂರು, ದಿನಾಂಕ 14.05.2025 ರಲ್ಲಿ (ಲಗತ್ತಿಸಿದೆ) ತಿಳಿಸಿರುವಂತೆ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಜನೌಷದಿ ಕೇಂದ್ರಗಳನ್ನು ಅವರೊಂದಿಗೆ ಮಾಡಿಕೊಂಡಿರುವ ಒಪ್ಪಂದ ನಿಯಮಗಳ (MOU) ಅನುಮತಿ ಪತ್ರದ ಪ್ರಕಾರ ಸ್ಥಗಿತಗೊಳಿಸಲು ಆದೇಶವಾಗಿದೆ. |
| ಆ) | ಈಗಾಗಲೇ ಎಷ್ಟು ಕೇಂದ್ರಗಳನ್ನು ತೆರವುಗೊಳಿಸಲಾಗಿದೆ; ಅವುಗಳಲ್ಲಿ ಯಾವ್ಯಾವು ಸೇವಾ ಸಂಸ್ಥೆಗಳು (ಅಂಗನವಾಡಿ, ಆರೋಗ್ಯ ಕೇಂದ್ರ, ಶಾಲೆ, ಇತ್ಯಾದಿ) ಇದ್ದವು; ತೆರವುಗೊಳಿಸಲಾದ ಅಥವಾ ಗುರುತಿಸಲಾದ ಕೇಂದ್ರಗಳಿಗೆ ಪರ್ಯಾಯ ವ್ಯವಸ್ಥೆಯಾದ ಸ್ಥಳಾಂತರ, ಪುನರ್ ನಿರ್ಮಾಣ ಅಥವಾ ಸೇವಾ ನಿಲ್ದಾಣಗಳ ಸ್ಥಾಪನೆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ; | ಜನೌಷಧಿ ಕೇಂದ್ರಗಳನ್ನು ತೆರವುಗೊಳಿಸಲು ಸರ್ಕಾರ ಹೊರಡಿಸಿರುವ ಆದೇಶದ ವಿರುದ್ಧ ಕೆಲವು ಜನೌಷಧಿ ಕೇಂದ್ರದ ಮಳಿಗೆದಾರರು, ನ್ಯಾಯಾಲಯಗಳಲ್ಲಿ ದಾವೆಯನ್ನು ದಾಖಲಿಸಿರುವುದರಿಂದ ಪ್ರಕರಣಗಳ ಇತ್ಯರ್ಥದಂತೆ ಕ್ರಮವಹಿಸಲಾಗುವುದು.<br><br>ಸರ್ಕಾರಿ ಆಸ್ಪತ್ರೆಗಳ ಹೊರಗೆ ಸ್ಥಾಪನೆಯಾಗಿರುವ ಜನೌಷಧಿ ಕೇಂದ್ರಗಳನ್ನು ಸ್ಥಗಿತಗೊಳಿಸಲು ಯಾವುದೇ ಆದೇಶವಾಗಿರುವುದಿಲ್ಲ.<br><br>ಪರ್ಯಾಯ ವ್ಯವಸ್ಥೆಯ ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| ಇ) | ಸರ್ಕಾರದ ತೀರ್ಮಾನದಿಂದ ಸಾಮಾನ್ಯ ಜನರ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ನಿರ್ವಹಿಸಲು ಏನು ಸಮೀಕ್ಷೆ ನಡೆಸಲಾಗಿದೆ ಮತ್ತು ಏನು ಕ್ರಮ ,ಕೈಗೊಳ್ಳಲಾಗಿದೆ: ಈ ಕಾರ್ಯದಿಂದಾಗಿ ಯಾವ ಇಲಾಖೆಗಳಲ್ಲಿ ಸಮಿತಿಯನ್ನು ರಚಿಸಲಾಗಿದೆ: ಅದರ ಕಾರ್ಯಪದ್ಧತಿ ಮತ್ತು ವರದಿ ನೀಡುವ ಅವಧಿಯೇನು: | ಸರ್ಕಾರದ ಆದೇಶ ಸಂಖ್ಯೆ ಆಕುಕ 173 ಪಿಟಿಡಿ 2025, ದಿನಾಂಕ: 14.05.2025 ರಲ್ಲಿ ತಿಳಿಸಿರುವಂತೆ ಜೆನೆರಿಕ್ ಔಷಧಿಗಳ ಖರೀದಿಗೆ ಬಿ.ಪಿ.ಪಿ.ಐ ಯೊಂದಿಗೆ ಕೆ.ಎಸ್.ಎಂ.ಎಸ್.ಸಿ.ಎಲ್ ರವರು ವಿಶೇಷ ದರಗಳನ್ನು ರೂಪಿಸಲು ಸೂಚಿಸಿದೆ. ಪರ್ಯಾಯವಾಗಿ, ಆಸ್ಪತ್ರೆಗಳು ಬಿ.ಪಿ.ಪಿ.ಐ (BPPI Bureau of Pharma PSUs of India) ಯಿಂದ ಔಷಧಿಗಳನ್ನು ಖರೀದಿಸಿ ರೋಗಿಗಳಿಗೆ ಉಚಿತವಾಗಿ ವಿತರಿಸಲು ಕ್ರಮವಹಿಸಲು ಸೂಚಿಸಲಾಗಿದೆ.<br>ಯಾವುದೇ ಸಮೀಕ್ಷೆಯಾಗಿರುವುದಿಲ್ಲ ಮತ್ತು ಯಾವುದೇ ಸಮಿತಿಯನ್ನು ರಚಿಸಲಾಗಿರುವುದಿಲ್ಲ |
| ಈ) | ಈ ಕೇಂದ್ರಗಳ ತೆರವು ಕಾರ್ಯವನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಯೋಜಿಸಿದೆ? | ಜನೌಷಧಿ ಕೇಂದ್ರಗಳನ್ನು ಆಯಾ ಕೇಂದ್ರಗಳ MOU ಪ್ರಕಾರ ಚಾಲ್ತಿಯಲ್ಲಿರುವ ದಿನಾಂಕ, ನ್ಯಾಯಾಲಯದಲ್ಲಿ ಪ್ರಕರಣದ ಇತ್ಯರ್ಥ ಇತ್ಯಾದಿಗಳ ಮೇಲೆ ಅವಲಂಬಿತರಾಗಿರುತ್ತದೆ. |

ಸಂಖ್ಯೆ: ಆಕುಕ 283 ಪಿಟಿಡಿ 2025

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ - 1

## ಜಿಲ್ಲಾವಾರು ಜನೌಷಧಿ ಕೇಂದ್ರಗಳ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | MSIL | Individual | ARS | NGO's | Total |
|---|---|---|---|---|---|---|
| 1 | ಬಾಗಲಕೋಟೆ | 0 | 1 | | | 1 |
| 2 | ಬೆಂಗಳೂರು ಗ್ರಾಮಾಂತರ | 0 | 6 | | | 6 |
| 3 | ಬೆಂಗಳೂರು ನಗರ | 1 | 5 | 1 | 1 | 8 |
| 4 | ಬೆಳಗಾವಿ | 3 | 4 | | | 7 |
| 5 | ಬಳ್ಳಾರಿ | | 4 | | 1 | 5 |
| 6 | ಬೀದರ | | 17 | | | 17 |
| 7 | ಬಿಜಾಪುರ(ವಿಜಯಪುರ) | 3 | 3 | | 1 | 7 |
| 8 | ಚಾಮರಾಜನಗರ | 2 | 3 | | 1 | 6 |
| 9 | ಚಿಕ್ಕಬಳ್ಳಾಪುರ | 5 | 5 | | | 10 |
| 10 | ಚಿಕ್ಕಮಗಳೂರು | 4 | 4 | | | 8 |
| 11 | ಚಿತ್ರದುರ್ಗ | | 10 | | 3 | 13 |
| 12 | ದಕ್ಷಿಣ ಕನ್ನಡ | 2 | 5 | | 1 | 8 |
| 13 | ದಾವಣಗೆರೆ | 6 | 3 | | | 9 |
| 14 | ಧಾರವಾಡ | 3 | | | | 3 |
| 15 | ಗದಗ | 1 | 4 | | | 5 |
| 16 | ಕಲ್ಬುರ್ಗಿ | | 6 | | | 6 |
| 17 | ಹಾಸನ | 6 | 2 | | | 8 |
| 18 | ಹಾವೇರಿ | 5 | 5 | | | 10 |
| 19 | ಕೊಡಗು | | 3 | | | 3 |
| 20 | ಕೋಲಾರ | 2 | 5 | | 1 | 8 |
| 21 | ಕೊಪ್ಪಳ | 3 | | | | 3 |
| 22 | ಮಂಡ್ಯ | 5 | 2 | | | 7 |
| 23 | ಮೈಸೂರು | 4 | 3 | | | 7 |
| 24 | ರಾಮನಗರ | 1 | 1 | | | 2 |
| 25 | ರಾಯಚೂರು | 3 | 4 | | | 7 |
| 26 | ಶಿವಮೊಗ್ಗ | 4 | 4 | | | 8 |
| 27 | ತುಮಕೂರು | 7 | 1 | | 1 | 9 |
| 28 | ಉಡುಪಿ | | 2 | | 2 | 4 |
| 29 | ಉತ್ತರ ಕನ್ನಡ | | 5 | | | 5 |
| 30 | ಯಾದಗಿರಿ | 1 | 2 | | | 3 |
| 31 | ವಿಜಯನಗರ | 1 | 1 | | 2 | 4 |
| | **Total** | **72** | **120** | **1** | **14** | **207** |

ಜಂಟಿ ನಿರ್ದೇಶಕರು (ವೈದ್ಯಕೀಯ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
ಆರೋಗ್ಯ ಸೌಧ, ಬೆಂಗಳೂರು-23



File No. HFW/283/PTD/2025-IMD-HEALTH AND FAMILY WELFARE SEC (Computer No. 1859458)
Generated from eOffice by ROJARAJU, HFW-IMD-AST2(RR), ASSISTANT, HEALTH AND FAMILY WELFARE SEC on 11/08/2025 11:50 AM